



# ಸಂಗೀತ ಕೈಹಿಡಿದಿದೆ

**ಆಶಿಕಾ ಗೋಪಾಲ್ ಪಡುಕೋಣೆ**

ಸ್ಟಾರ್ ಸುವರ್ಣದ
'ತ್ರಿವೇಣಿ ಸಂಗಮ'ದ ನಿಹಾರಿಕಾ

★ *ಮಧ್ಯಂತರ ಪಾತ್ರ ನಿರ್ವಹಣೆ ಹೇಗೆನಿಸುತ್ತದೆ?*

ರಚನಾ ಅವರ ಅಕಾಲಿಕ ನಿಧನದಿಂದ ನಿಹಾರಿಕಾ ಪಾತ್ರ ನನಗೆ ಒಲಿದು ಬಂದಿದೆ. ಆಕೆ ನಟಿಸಿದ್ದ 'ಮಹಾನದಿ' ಧಾರಾವಾಹಿಯನ್ನು ನಾನು ನೋಡುತ್ತಿದ್ದೆ. ಆಗಿನಿಂದಲೂ ಅವರ ಅಭಿನಯವನ್ನು ನಾನು ನೋಡುತ್ತಾ ಇದ್ದೆ. 'ತ್ರಿವೇಣಿ ಸಂಗಮ' ನನಗೆ ಗೊತ್ತಿರಲಿಲ್ಲ. ನನಗೆ ಇಲ್ಲಿ ಅವಕಾಶ ಸಿಕ್ಕ ಮೇಲೆ ಹಳೆಯ ವಿಡಿಯೋಗಳನ್ನು ನೋಡಿದೆ. ಆಮೂಲಕ ಕಥೆಯ ಪೂರ್ವಾಪರ ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ನಾನು ಹಿಂದೂಸ್ತಾನಿ ಗಾಯನವನ್ನು ಕಲಿತಿದ್ದೇನೆ. ಸಂಗೀತ ಆಧಾರಿತ ಕಥೆಯನ್ನು ಈ ಧಾರಾವಾಹಿ ಒಳಗೊಂಡಿದ್ದು ನನಗೆ ತುಂಬಾ ಸಹಾಯಕ್ಕೆ ಬಂತು. ನಿರ್ದೇಶಕ ತಿಲಕ್ ಅವರು ಕೂಡ ಸಮಧಾನದಿಂದ ಹೇಳಿಕೊಡುತ್ತಾರೆ. ತಂಡದ ಸಹಕಾರ ನನಗೆ ಕಷ್ಟ ಅನ್ನಿಸಲಿಲ್ಲ.

★ *ಕಥೆ ಹೇಗೆನ್ನಿಸುತ್ತಿದೆ ?*

ಕಥೆ ತುಂಬಾ ಮನಮೋಹಕವಾಗಿದೆ. ವೈಯಕ್ತಿಕವಾಗಿ ನನಗೂ ತುಂಬಾ ಹಿಡಿಸಿದೆ. ಒಬ್ಬ ಗಾಯಕಿಯಾಗಿರುವುದರಿಂದ ತ್ರಿವೇಣಿ ಪಾತ್ರ ನಿಭಾಯಿಸುವುದು ಕಷ್ಟವಾಗುವುದಿಲ್ಲ. ಈಗ ಅಪ್ಪನ ಖ್ಯಾತಿಯನ್ನು ಬಳಸದೆ ಬೆಳೆದಿದ್ದೇನೆ. ಈಗ ಅವರನ್ನು ಕರೆದುಕೊಂಡು ಬರಬೇಕಿದೆ.

★ *ಬದಲಿ ಹಾದಿ ಹಿಡಿದಿದ್ದೇನೆ ಅಂತ ನಿಮಗೆ ಅನ್ನಿಸಿದೆಯಾ?*

ಇದನ್ನೇ ಮಾಡಬೇಕು ಎಂದು ನಾನು ಅಂದುಕೊಂಡಿರಲಿಲ್ಲ. ಮುಂದೆ ಕೂಡ ಇದೇ ಆಗಬೇಕು ಎಂದೂ ಯೋಚಿಸಿಲ್ಲ. ಇದೊಂದು ಅವಕಾಶ ನೋಡೋಣ ಎನ್ನುವ ಮನೋಭಾವದಲ್ಲಿ ಬಂದಿದ್ದೇನೆ. ಎಂಜಿನಿಯರಿಂಗ್ ಮುಗಿದ ತಕ್ಷಣ ನನಗೆ ಕ್ಯಾಂಪಸ್ ಸಂದರ್ಶನದಲ್ಲಿಯೇ ಕೆಲಸ ಸಿಕ್ಕಿತ್ತು. ಆದರೆ ಅಭಿನಯವೂ ಒಂದು ಒಳ್ಳೆಯ ಅವಕಾಶ ಅಂತ ಬಂದಿದ್ದೇನೆ. ಈ ಮೊದಲು ಕೂಡ ಹಲವು ಅವಕಾಶಗಳು ಸಣ್ಣಪುಟ್ಟ ಪಾತ್ರಗಳ ನಿರ್ವಹಣೆಗಾಗಿ ಬಂದಿದ್ದವು. ಆದರೆ ಅವುಗಳನ್ನು ಒಪ್ಪಲಿಲ್ಲ. ಆಗ ಓದು ಮುಖ್ಯ ಅಂತ ನನಗೆ ಅನ್ನಿಸಿತ್ತು. ಮೇಲಾಗಿ ಆಯ್ಕೆಗೂ ನನ್ನದೇ ಕಾರಣಗಳು ಇರುತ್ತವೆ. 'ತ್ರಿವೇಣಿ' ಪಾತ್ರವನ್ನು ಇಷ್ಟಪಟ್ಟು ನಟಿಸುತ್ತಿದ್ದೇನೆ. ಇದೇ ಮೊದಲ ಬಾರಿಗೆ ಪ್ರಧಾನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಈ ಮೊದಲು ಒಂದು ಸಣ್ಣ ಪಾತ್ರವನ್ನು ನನ್ನ ಸಂಬಂಧಿಯೊಬ್ಬರ ಒತ್ತಾಸೆಗೆ ಮಾಡಿದ್ದೆ. ಅದೇ ತೆರೆಗೆ ಬರಲು ಒಂದು ರೀತಿಯಲ್ಲಿ ಕಾರಣ ಎನ್ನಬಹುದು.

★ *ನಿಮ್ಮ ಸ್ನೇಹಿತರು ಏನೆನ್ನುತ್ತಾರೆ?*

ಭಿನ್ನ ಮಾರ್ಗದಲ್ಲಿ ಸಾಗುವುದು ನನ್ನ ಸ್ನೇಹಿತರಿಗೂ ಇಷ್ಟವಾಗಿದೆ. ಧಾರಾವಾಹಿಯನ್ನೇ ನೋಡದ ಅನೇಕರು ನನಗಾಗಿ ನಮ್ಮ ಧಾರಾವಾಹಿಯನ್ನು ನೋಡುತ್ತಿದ್ದಾರೆ. ಖುಷಿ ಅನ್ನಿಸಿರುವುದರಿಂದ ಅವರು ನನ್ನನ್ನು ಬೆಂಬಲಿಸುತ್ತಾರೆ.

★ *ಸಿನಿಮಾಕ್ಕೆ ಅವಕಾಶ ಸಿಕ್ಕರೆ ಏನು ಮಾಡುತ್ತೀರಿ?*

ಸಿಕ್ಕಂತಹ ಅವಕಾಶ ಒಳ್ಳೆಯ ಬ್ರೇಕ್ ಕೊಡುತ್ತದೆ ಎನ್ನುವುದು ಮನವರಿಕೆ ಆದರೆ ಒಪ್ಪುತ್ತೇನೆ. ಇಲ್ಲದಿದ್ದರೆ ಒಪ್ಪುವುದಿಲ್ಲ. ಚಿತ್ರ ತಂಡ, ನಿರ್ದೇಶಕರು ಮಾತ್ರ ಅಲ್ಲದೆ ಕಥೆ ಕೂಡ ಮುಖ್ಯವಾಗುತ್ತದೆ.

ಶಿಕ್ಷಣವನ್ನೂ ಮುಂದುವರಿಸುವ ಆಶೆ ಇದೆ. ಸದ್ಯಕ್ಕೆ ಅದು ಆಗಲಿಕ್ಕಿಲ್ಲ. ಒಂದು ಪಕ್ಷ ಇದಾವುದೂ ಸರಿ ಎನ್ನಿಸಿದಿದ್ದರೆ ಎಂಎಸ್ ಮಾಡುತ್ತೇನೆ.

★ *ಬಿಡುವಿನ ಸಮಯದಲ್ಲಿ ಏನು ಮಾಡುತ್ತೀರಿ?*

ನೃತ್ಯ– ಸಂಗೀತವನ್ನು ಮೊದಲಿನಿಂದಲೂ ಅಭ್ಯಾಸ ಮಾಡುತ್ತಾ ಬಂದಿದ್ದೇನೆ. ಬಿಡುವಿನ ಸಮಯವನ್ನು ಅದಕ್ಕೇ ಮಿಸಲಿಡುತ್ತೇನೆ.

★ *ನೀವು ಇಷ್ಟಪಡುವ ಸಂಗತಿಗಳು ಯಾವವು?*

ಶಾಪಿಂಗ್ ತುಂಬಾ ಇಷ್ಟ. ಬೇರೆ ಬೇರೆ ವಿನ್ಯಾಸದ, ಭಿನ್ನ ಭಿನ್ನ ಡ್ರೆಸ್‌ಗಳನ್ನು ತೊಡುವುದು ಇಷ್ಟ. ವೈವಿಧ್ಯ ಉಡುಪನ್ನು ಖರೀದಿಸುತ್ತೇನೆ. ಸಾಮಾನ್ಯವಾಗಿ ಬೆಂಗಳೂರಿನಲ್ಲಿಯೇ ನಾನು ಶಾಪಿಂಗ್ ಮಾಡುವುದು.

ಅಡುಗೆ ಮಾಡುವುದು ಇಷ್ಟ. ಬೇಕಿಂಗ್, ಡೆಸರ್ಟ್ಸ್ ಮಾಡುವುದು ಖುಷಿ ಕೊಡುತ್ತದೆ. ಮಾತ್ರವಲ್ಲ ಅದನ್ನು ಸವಿಯುವುದು ಕೂಡ ಅಷ್ಟೇ ಖುಷಿ ಕೊಡುತ್ತದೆ.

★ *ನೀವು ಬೆಳೆದು ಬಂದಿದ್ದು?*

ನನ್ನ ತಂದೆ ಗೋಪಾಲ್ ಪಡುಕೋಣೆ, ಅಮ್ಮ ಹೇಮಲತಾ. ತಂದೆ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದರು. ಅವರಿಗೆ ಮೂರು ವರ್ಷಕ್ಕೊಮ್ಮೆ ವರ್ಗಾವಣೆ ಇರುತ್ತಿತ್ತು. ಮುಂಬೈ, ಹುಬ್ಬಳ್ಳಿ ಎಂದು ಊರೂರು ಸುತ್ತಿ ಈಗ ಬೆಂಗಳೂರಿನಲ್ಲಿಯೇ ನೆಲೆಸಿದ್ದೇವೆ.

■ **ರಾಘವೇಂದ್ರ**